**ಕರ್ನಾಟಕ ಸರ್ಕಾರ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.684/2014**

**ಪಿ.ಡಬ್ಲ್ಯೂಃ 18**

**ಸಿ.ಡಬ್ಲ್ಯೂಃ 21**

| | | |
|---|---|---|
| ಸಾಕ್ಷಿದಾರರ **ಹೆಸರು** | ಃ | ಬಿ.ಹೆಚ್ ಚಂದ್ರಶೇಖರ್ |
| ತಂದೆಯ **ಹೆಸರು** | ಃ | ಲೇಟ್ ಹರಿರಾಮ್ |
| **ವಯಸ್ಸು** | ಃ | 66 **ವರ್ಷ** |
| **ಉದ್ಯೋಗ** | ಃ | ನಿವೃತ್ತ ಎ ಎಸ್ ಐ |
| **ವಾಸಸ್ಥಳ** | ಃ | ಭೂತನ ಗುಡಿ, ಭದ್ರಾವತಿ |

**ದಿನಾಂಕಃ 14-09-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ ಃ ಸ.ಸ.ಅ. ರವರಿಂದ**

2011 ರಿಂದ ಮಾರ್ಚ 2015 ರವರೆಗೆ ನಾನು ಲಕ್ಕವಳ್ಳಿ ಪೊಲೀಸ್ ಠಾಣೆಯಲ್ಲಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 14-03-2014 ರಂದು ಸ. 7-00 ಗಂಟೆಗೆ ಚಾಸಾ-2 ರವರು ಚಾಸಾ-1 ರವರ ಲಿಖಿತ ದೂರನ್ನು ಹಾಜರುಪಡಿಸಿದ್ದು, ಅದನ್ನು ಪಡೆದು ನಾನು ಠಾಣಾ ಮೊ ಸಂ. 55/2014 ರಂತೆ ಪ್ರಕರಣ ದಾಖಲಿಸಿ ಪ್ರ ವ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ದಿಃ 15-03-2014 ರಂದು ಕೃತ್ಯ ಸ್ಥಳಕ್ಕೆ ಭೇಟಿ ನೀಡಿ ಚಾಸಾ-3 ಮತ್ತು 4 ರವರು ಸ್ಥಳ ತೋರಿಸಿದಂತೆ ಚಾಸಾ-11 ಮತ್ತು 12 ರವರ ಸಮಕ್ಷಮ ಮಹಜರ್ ನ್ನು ಬೆಳಿಗ್ಗೆ 11-30 ರಿಂದ 12-00 ಗಂಟೆ ಸಮಯದಲ್ಲಿ ಜರುಗಿಸಿರುತ್ತೇನೆ. ನಂತರ ಸಾಕ್ಷಿದಾರರಾದ ಚಾಸಾ-6, ರಿಂದ 9 ರವರ ಹೇಳಿಕೆ ಪಡೆದಿರುತ್ತೇನೆ. ದಿಃ 20-03-2014 ರಂದು ಚಾಸಾ-14 ರವರು ಅಸಸ್ ಮೆಂಟ್ ಪುಸ್ತಕ ಮತ್ತು ನಡವಳಿ ಪುಸ್ತಕವನ್ನು ಠಾಣೆಗೆ ತಂದು ಹಾಜರುಪಡಿಸಿದ ಮೇರೆಗೆ ಚಾಸಾ-13 ಮತ್ತು 15 ರವರ ಸಮಕ್ಷಮ ಮಹಜರ್ ನ್ನು ಬೆಳಿಗ್ಗೆ 11-00 ರಿಂದ 12-10 ರವರೆಗೆ ಜರುಗಿಸಿ ಅಮಾನತ್ತುಪಡಿಸಿಕೊಂಡಿರುತ್ತೇನೆ. ನಂತರ ಅವುಗಳನ್ನು ಮಾಲುಪಟ್ಟಿಯಲ್ಲಿ ಸೇರಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನಂತರ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-22 ರವರಿಗೆ ವಹಿಸಿಕೊಟ್ಟಿರುತ್ತೇನೆ. ಸಾಕ್ಷಿಯು ನಿಪಿ-1 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-4 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-4(ಇ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-8 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-8(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರ ವ ವರದಿಯಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-11 ಎಂದು ಸಾಕ್ಷಿಯ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಮಾಲು ಪಟ್ಟಿಯಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-12 ಎಂದು, ಸಾಕ್ಷಿಯ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು.

***ಪಾಟೀ ಸವಾಲು ಃ 1ನೇ ಆರೋಪಿ ಪರ ಶ್ರೀ ಎ ಆರ್ ಕೆ ವಕೀಲರಿಂದ.***

ನಾನು ಸ್ಥಳ ಮಹಜರ್ ಮಾಡಿದಾಗ ಸದರಿ ಸ್ಥಳವು ಸರ್ಕಾರಿ ಭೂಮಿ ಸರ್ವೆ ನಂ. *7ಪಿ2* ಎಂದು ತಿಳಿದುಬಂದಿತು. ನಾನು ಸ್ಥಳ ತನಿಖೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಪಂಚರಿಗೆ ನೋಟೀಸು ನೀಡಿದ್ದು ಅವರು ಸ್ಥಳದಲ್ಲಿ ಹಾಜರಿರುತ್ತಾರೆ. ನಾನು ಯಾವುದೇ ನೋಟೀಸು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸ್ಥಳ ಪಂಚನಾಮೆ ಸಮಯದಲ್ಲಿ ಪೋಟೋ ತೆಗೆಯಲು ತೊಂದರೆ ಇರಲಿಲ್ಲ ಎಂದರೆ ನನಗೆ ನೆನಪಿಲ್ಲ. ನಾನು ಸ್ಥಳ ತನಿಖೆ ಮಾಡಿಲ್ಲ ಆದ್ದರಿಂದ ಪೋಟೋ ತೆಗೆದಿಲ್ಲ ಎಂದರೆ ಸರಿಯಲ್ಲ. ದಿಃ *16-03-2014* ರಂದು ಚಾಸಾ-*14* ರವರಿಗೆ ದಾಖಲೆ ಹಾಜರುಪಡಿಸಲು ನೋಟೀಸು ನೀಡಿರುತ್ತೇನೆ. ಮಹಜರ್ ಮಾಡುವಾಗ ಪೋಟೋ ತೆಗೆದಿರಕ್ಕಿಲ್ಲ. ನಾನು ಯಾವುದೇ ಮಹಜರು ಮಾಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರ ಹೇಳಿಕೆ ಮತ್ತು ಪಂಚರ ಸಹಿ ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನಿವೇಶನ ಕೋರಿ ಅರ್ಜಿ ಸಲ್ಲಿಸಿರುವ ದಾಖಲೆಯನ್ನು ನಾನು ಪರಿಶೀಲಿಸಿಲ್ಲ.

***ಪಾಟೀ ಸವಾಲು ಃ 2ನೇ ಆರೋಪಿ ಪರ ಶ್ರೀ ಕೆ ಸಿ ವಕೀಲರಿಂದ.***

ಆರೋಪಿತರು ಯಾವುದೇ ಕೃತ್ಯ ಎಸಗದಿದ್ದರೂ ಸಹ ಅವರ ವಿರುದ್ದ ಸುಳ್ಳು ಮೊಕದ್ದಮೆ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

*(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)*

ಓ. ಕೇ. ಸ. ಇ. ಎ. ಒ.

Sd/-

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**